### ಪ್ರವಾಸದ ಆನಂದ...

‘ಲೇಡಿ ಮಸ್‌ಗ್ರೇವ್; ಇಲ್ಲಿ ಹವಳವೇ ನಿತ್ಯ–ಸತ್ಯ’ (ಫೆ. 29, ವಿನತೆ ಶರ್ಮಾ) ‘ಪ್ರವಾಸ ಕಥನ’, ಉತ್ತಮ ಮಾಹಿತಿಗಳನ್ನು ಒಳಗೊಂಡಿದೆ. ನಾವು ಉತ್ತರದ ಗ್ರೇಟ್ ಬ್ಯಾರಿಯರ್ ರೀಫ್‌ಗೆ ಹೋಗಿದ್ದೆವು. ಅಲ್ಲಿ ಅರ್ಧ ಸಬ್‌ಮೆರಿನ್‌ನಲ್ಲಿ ಮತ್ತು



ದೋಣಿಯಲ್ಲಿ ಸುತ್ತಲೂ ಹರಡಿಕೊಂಡಿದ್ದ ಸಮುದ್ರ ನೋಡುತ್ತಾ, ಗಾಜಿನ ಕಿಟಕಿಗಳಿಂದ ಸಾಗರಲೋಕದ ಚೆಲುವು ಕಂಡು ಬೆರಗಾಗಿದ್ದೆವು. ಹಾಗೆಯೇ ಹೆಲಿಕಾಪ್ಟರ್ ಸೌಲಭ್ಯ ಪಡೆದುಕೊಂಡು ಆಕಾಶದಿಂದಲೂ ದ್ವೀಪಗಳನ್ನು ವೀಕ್ಷಿಸಿ ಆನಂದ ಪಡೆದಿದ್ದೆವು.

—ಪ್ರೊ. ಎಸ್.ಆರ್. ದೇವಪ್ರಕಾಶ್, ತುಮಕೂರು

### ಸಿನಿಮಾರಂಗದ ಇತಿಹಾಸದ ಮೆಲುಕು

‘ಸುಲೋಚನೆಗೆ ತೊಂಬತ್ತು’ (ಫೆ. 29, ರಘುನಾಥ ಚ.ಹ.) ಮುಖಪುಟ ಲೇಖನ, ಒಂಬತ್ತು ಆಯಾಮಗಳಲ್ಲಿ ಕನ್ನಡ ಸಿನಿಮಾರಂಗದ ತೊಂಬತ್ತು ವರ್ಷದ ಇತಿಹಾಸದ ಪಕ್ಷಿನೋಟವನ್ನು ನೀಡಿತು.

ಪ್ರತಿ ಕಾಲಘಟ್ಟದಲ್ಲಿಯೂ ಸಿನಿಮಾರಂಗ ಕಂಡ ಮನ್ವಂತರಗಳನ್ನು, ಹೊಸ ಹೊಸ ನಿರ್ದೇಶಕರು, ನಟರ ಪರಿಚಯವನ್ನು, ಕನ್ನಡ ಸಿನಿಮಾರಂಗ ಬೆಳೆದುಬಂದ ಮಜಲುಗಳನ್ನು ಒಳಗೊಂಡ ಲೇಖನ ಮಾಹಿತಿಪೂರ್ಣವಾಗಿತ್ತು. ಸಿನಿಮಾರಂಗದ ಇತಿಹಾಸವನ್ನೊಮ್ಮೆ ಮೆಲುಕು ಹಾಕುವಂತೆ ಮಾಡಿತು.

—ಚಿನ್ಮಯಿ ಎಂ., ಮೈಸೂರು

### ಬೆಳವಣಿಗೆಯ ಮಜಲು

ಕನ್ನಡ ಚಿತ್ರರಂಗದ ಒಂಬತ್ತು ದಶಕಗಳನ್ನು ಒಂಬತ್ತು ಆಯಾಮಗಳಲ್ಲಿ ಕಟ್ಟಿಕೊಟ್ಟಿರುವ ಲೇಖನ ಅದ್ಭುತವಾಗಿದೆ. ಕನ್ನಡ ಚಿತ್ರರಂಗ ನಡೆದುಬಂದ ಹಾದಿ, ಆ ಹಾದಿಯಲ್ಲಿ ಕಂಡ ಹಲವು ಬದಲಾವಣೆ, ಬೆಳವಣಿಗೆಗಳ ಚಿತ್ರಣವನ್ನು ಸಮರ್ಪಕವಾಗಿ ನೀಡಿದ್ದಾರೆ.

—ಸಿ.ಆರ್. ಶ್ರೀನಿವಾಸ, ಬೆಂಗಳೂರು




### ‘ಚಿತ್ರ ಪರಂಪರೆ’ಯ ಪಕ್ಷಿನೋಟ

ಕನ್ನಡದ ಮೊದಲ ವಾಕ್ಚಿತ್ರ ಎಂದು ಕರೆಸಿಕೊಂಡ ‘ಸತಿ ಸುಲೋಚನಾ’ ಸಿನಿಮಾದಿಂದ ಹಿಡಿದು ಈವರೆಗಿನ ಸಿನಿಮಾರಂಗದ ಹಾದಿಯನ್ನು ಚಿಕ್ಕದಾಗಿ, ಚೊಕ್ಕದಾಗಿ, ಒಂಬತ್ತು ಆಯಾಮಗಳಲ್ಲಿ ಬಿಡಿಬಿಡಿಯಾಗಿ ಬಿಡಿಸಿಕೊಟ್ಟ ರೀತಿ ನನಗೆ ಹಿಡಿಸಿತು.

ಸುಮಾರು ಒಂಬತ್ತು ದಶಕಗಳ ಸಿನಿಮಾರಂಗದ ರೀಲ್ ಮನದ ತೆರೆ ಮೇಲೆ ಚಲಿಸಿ ಹೋದಂತೆ ಅನ್ನಿಸಿತು. ಕನ್ನಡ ಸಿನಿಮಾರಂಗದ ಪ್ರಮುಖ ಮೈಲಿಗಲ್ಲುಗಳ ಬಗ್ಗೆ ಇಣುಕುನೋಟ ನೀಡಿತು. ಸಂಗ್ರಹಯೋಗ್ಯ ಮುಖಪುಟ ಲೇಖನ.

—ದಯಾನಂದ ಟಿ.ಆರ್., ಬೆಂಗಳೂರು

### ಸುಂದರ ಪ್ರೇಮಕಥೆಗಳು

‘ದಣಿವರಿಯದ ದೀಪ’, ‘ಅವರ ಬದುಕಿನೊಂದು ಪುಟ’ (ಫೆ. 29, ಗೀತಾ ಸೀತಾರಾಮ್, ಸ. ರಘುನಾಥ) ಎರಡೂ ಕಥೆಗಳು ಇಷ್ಟವಾದವು.

ಪ್ರೇಮ, ದಾಂಪತ್ಯ ಜೀವನದ ಸಿಹಿಯನ್ನು ಕಥೆಗಳಲ್ಲಿ ತೆರೆದಿಟ್ಟ ಶೈಲಿ ಮನತಟ್ಟಿತು.



ಪ್ರೇಮಿಯನ್ನು ಭೇಟಿಯಾಗಲು ಸಾಧ್ಯವಾಗದಿದ್ದರೂ, ಅವಳಿಗೆ ತಾನವಳನ್ನು ಪ್ರತಿಕ್ಷಣ ನೆನೆಯುತ್ತಿದ್ದೇನೆ ಎಂಬುದರ ಸಂಕೇತವಾಗಿ ಇಡುತ್ತಿದ್ದ ಆ ಪ್ರಣತಿಯ ಸಂಗತಿ ಬಹಳ ಇಷ್ಟವಾಯಿತು.

—ಸಮನ್ವಯಿ, ಬಾಗಲಕೋಟೆ

### ಅದ್ಭುತ ಪ್ರೇಮಕಥನ

‘ದಣಿವರಿಯದ ದೀಪ’ ಕಥೆ ಅದ್ಭುತವಾಗಿದೆ. ಓದುವಷ್ಟು ಹೊತ್ತೂ ಇದು ಕಥೆಯೇ, ಇತಿಹಾಸವೇ ಅಥವಾ ಜಾನಪದ ಕಥನವೇ ಎಂಬ ಕುತೂಹಲ ಕೆರಳಿಸಿತು. ಕೊನೆಯವರೆಗೂ ಸುಲಲಿತವಾಗಿ ಓದಿಸಿಕೊಂಡು ಹೋಯಿತು.

—ಕುಚ್ಚಣ್ಣ ಶ್ರೀನಿವಾಸನ್

### ಮಾರ್ಮಿಕ ನುಡಿಗಳು

‘ದೇವರು–ಮಂದಿರ’ (ಫೆ. 29, ಚಂಪಕಮಾಲಾ) ‘ವಿಚಾರ ಲಹರಿ’ ಪ್ರತಿಯೊಬ್ಬರೂ ಓದಲೇಬೇಕಾದ್ದು. ‘ಕಾಯಕವೇ ದೇವರು’ ಎನ್ನುವುದನ್ನು ಮಾರ್ಮಿಕವಾಗಿ ತಿಳಿಸಿದ್ದಾರೆ. ಜಡತ್ವವನ್ನು ಹೋಗಲಾಡಿಸಿ ಜನ್ಮ ಸಾರ್ಥಕವಾಗುವ ಕಡೆಗೆ ಉತ್ತೇಜಿಸಿದ್ದಾರೆ.

—ವಿಜಯಾ ಸುಂದರೇಶ್

### ಚಿಗುರಿನಲ್ಲೇ ಮುರುಟಿದ ಪ್ರತಿಭೆ

‘ಬುವಿಯಿಂದ ಬಾನಂಗಳಕ್ಕೆ ಮ್ಯಾರಥಾನ್ ಧ್ರುವತಾರೆ’ (ಫೆ. 29, ನಾಗೇಶ ಶೆಣೈ) ಲೇಖನ ಓದಿ ಬೇಸರವಾಯಿತು. ಕೆಲ್ವಿನ್ ಕಿಪ್ಟಮ್, 24ನೇ ವಯಸ್ಸಿಗೇ ದಾರುಣ ಅಂತ್ಯ ಕಂಡದ್ದು ದುಃಖ ತಂದ ಸಂಗತಿ. ಸಾರ್ವಕಾಲಿಕ ಶ್ರೇಷ್ಠ ಮ್ಯಾರಥಾನ್ ಓಟಗಾರನಾಗುವ ಹಾದಿಯಲ್ಲಿದ್ದ ಕೆನ್ಯಾದ ಕೆಲ್ವಿನ್ ಕಿಪ್ಟಮ್ ಬಡತನದಲ್ಲೂ ಗೆದ್ದು ಬಂದ ಪರಿ ರೋಮಾಂಚನವುಂಟು ಮಾಡುವಂಥದ್ದು. ಆದರೆ ಆ ಪ್ರತಿಭೆ, ಚಿಗುರಿನಲ್ಲೇ ಮುರುಟಿಹೋಯಿತು.

—ಶಶಿಕುಮಾರ್, ನೆಲಮಂಗಲ

### ಲವಲವಿಕೆಯ ‘ಮಂದಹಾಸ’

‘ಪಾರ್ಕಿಂಗಪ್ಪ ಪಾರ್ಕಿಂಗ್’ (ಫೆ. 29, ನಳಿನಿ ಟಿ. ಭೀಮಪ್ಪ) ‘ಮಂದಹಾಸ’ ಲೇಖನ ವಾಸ್ತವ ಪರಿಸ್ಥಿತಿಗೆ ಹಿಡಿದ ಕನ್ನಡಿಯಂತಿದೆ. ನಮ್ಮದೂ ಇದೇ ಸಮಸ್ಯೆಯಾದ್ದರಿಂದ ಲೇಖನದ ಪ್ರತಿ ಸಾಲೂ ಸತ್ಯವೆನಿಸಿತು. ಲವಲವಿಕೆಯ ಬರಹದ ಶೈಲಿ ನಕ್ಕು ನಲಿಸಿತು.

—ಜ್ಯೋತಿ ಉಮೇಶ್, ಮೈಸೂರು

### ಪಾರ್ಕಿಂಗ್ ಪರದಾಟ

ಕಾರು ಪಾರ್ಕಿಂಗ್ ಕುರಿತ ‘ಮಂದಹಾಸ’ ಲೇಖನ, ಕಾರು ಮಾಲೀಕರ ಪಾರ್ಕಿಂಗ್ ಪರದಾಟವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದೆ. ಎಲ್ಲಿಗೇ ಹೋದರೂ ‘ಪಾರ್ಕಿಂಗ್’ ಅನ್ನು ಗಮನದಲ್ಲಿಟ್ಟುಕೊಂಡಿರಬೇಕಾದ ಅನಿವಾರ್ಯ ಇಂದಿನದ್ದು. ತಿಳಿಹಾಸ್ಯದ ಭಾಷಾಶೈಲಿಯ ಲೇಖನ, ಓದುಗರಿಗೆ ಮುದ ನೀಡುವಂತಿದೆ.

— ಎಸ್.ವಿ. ನಾಯ್ಕ್ ರಾಣೇ, ಧಾರವಾಡ



**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in